ಬ್ರಾಹ್ಮಣ ಪರಿವಾರದಲ್ಲಿ ಜನ್ಮತಾಳಿದರು. ಮೂಲತಃ ಬೇದರೆ ಎಂಬ ಸ್ಥಳದಲ್ಲಿ ಇವರ ಪೂರ್ವಜರು ವಾಸವಾಗಿದ್ದರು. ಕಾಲಾಂತರದಲ್ಲಿ ಇವರ ತಾತನವರು ಪೇಷ್ವೆಗಳ ಸಹಾಯಕರಾಗಿ ಕರಾಡ್ ವಿಭಾಗದ ದಫ್ತರದಾರರಾಗಿದ್ದರು. ಅಲ್ಲಿಯೇ ಅವರ ಪರಿವಾರ ನೆಲೆಸಿತು. ಅಲ್ಲಿಂದ ಈಚೆಗೆ ಅವರ ಕುಟುಂಬದ ಹೆಸರು 'ಬೇದರೆ' ಎಂಬುದರ ಬದಲಾಗಿ, 'ದಫ್ತರದಾರ್' ಎಂದಾಯಿತು. ಇವರ ವಿದ್ಯಾಭ್ಯಾಸ ಹನ್ನೊಂದನೆಯ ವಯಸ್ಸಿನಲ್ಲಿ ಆರಂಭವಾಯಿತು. ಅತ್ಯಲ್ಪಕಾಲದಲ್ಲಿಯೇ ಇವರು ಬಾಲಬೋಧೆಯನ್ನು ಓದುವುದನ್ನೂ, ಮೋಡಿ ಅಕ್ಷರದಲ್ಲಿ ಬರೆಯುವುದನ್ನೂ ಕಲಿತುಕೊಂಡರು. ನಂತರ ಅಪ್ಪಾ ಪುರೋಹಿತರೆಂಬುವ ವಿದ್ವಾಂಸರ ಬಳಿ ಸಂಸ್ಕೃತ ಅಧ್ಯಯನಕ್ಕೆ ತೊಡಗಿದರು. ಮರುವರ್ಷ ಅವರ ವಿವಾಹವಾಯಿತು. ಕ್ರಮೇಣ ಅವರೇ ಈ ಶಾಲೆಯನ್ನು ಮುಂದುವರೆಸಿಕೊಂಡು ಹೋದರು.

ಸಂಸ್ಕೃತಭಾಷೆಯ ಐದು ಮಹಾಕಾವ್ಯಗಳ ಆಮೂಲಾಗ್ರ ಅಧ್ಯಯನದ ಜೊತೆಜೊತೆಗೆ ಮರಾಠಿ ಭಾಷೆಯ ಶ್ರೇಷ್ಠ ಗ್ರಂಥಗಳ ಅಧ್ಯಯನವನ್ನೂ ವಿಠೋಬಾ ಕೈಗೊಂಡರು. ಇದಲ್ಲದೆ ತಮ್ಮ ಸುಶ್ರಾವ್ಯವಾದ ಕಂಠದಿಂದ, ಸುಮಧುರವಾಣಿಯಲ್ಲಿ ಪೌರಾಣಿಕ ಕಥೆಗಳನ್ನೂ ಹೇಳುತ್ತಿದ್ದರು. ಈ ಕಥೆಗಳನ್ನು ಹೇಳುವಾಗ ಮನೋಹರವಾಗಿ ರಾಗಸಂಯೋಜನೆ ಮಾಡಿದ ಹಾಡುಗಳನ್ನೂ ಹಾಡುತ್ತಿದ್ದರು. ಹೀಗೆ ಅವರು ಕೀರ್ತನಕಲೆಯಲ್ಲಿಯೂ ಜಾಣ್ಮೆಯನ್ನು ಮೆರೆದರು. ವಿಠೋಬಾ ಬಾಲ್ಯದಿಂದಲೂ ಆಶುಕವಿಗಳಾಗಿದ್ದರು. ಇವರು ಸಂಸ್ಕೃತ ಭಾಷೆಯಲ್ಲಿ ಅನೇಕ ಕಾವ್ಯಗಳನ್ನು ರಚಿಸಿದ್ದಾರೆ. ಶ್ರೀರಾಮಚಂದ್ರ ದೇವರ ಉಪಾಸಕರಾದ ಕಾರಣ ಅವರ ಕಾವ್ಯಗಳಲ್ಲಿ ರಾಮಭಕ್ತಿಯ ಸೊಬಗು, ನಾನಾರೀತಿಯಲ್ಲಿ ವ್ಯಕ್ತವಾಗಿರುವುದನ್ನು ಕಾಣುತ್ತೇವೆ. ಇವರ ೧೦-೧೨ ಸಂಸ್ಕೃತ ಕೃತಿಗಳು ಮಹತ್ವವನ್ನು ಪಡೆದಿವೆ. ಅವುಗಳಲ್ಲಿ ಕೆಲವು ಹೀಗಿವೆ: 'ಗಜೇಂದ್ರ ಚಂಪೂ', 'ಶ್ರೀರಾಮವಿಷಯಕ ಸುಶ್ಲೋಕ ಲಾಘವ', 'ಹೇತು ರಾಮಾಯಣ', 'ಪ್ರಬೋಧೋತ್ಸವ ಲಾಘವ', 'ಸಾಧು ಪಾರ್ಷದ ಲಾಘವ' ಇತ್ಯಾದಿ. ಇದಲ್ಲದೆ ಅವರ ಮರಾಠಿ ಕಾವ್ಯಗಳಲ್ಲಿಯೂ ಸಂಸ್ಕೃತ ಪಾಂಡಿತ್ಯದ ಪ್ರಭಾವ ಇರುವುದನ್ನು ಗಮನಿಸಬಹುದು.

ವಿಠೋಬಾ ಅವರಿಗೆ ಸುಮಾರು ಮೂವತ್ತು ವರ್ಷವಿರುವಾಗ, ಅವರ ತಂದೆ, ತಾಯಿ ಮತ್ತು ಪತ್ನಿ ಕಾಲವಾದರು. ನಂತರ ಕೆಲಕಾಲಾನಂತರ ಅವರು ಪಾರ್ಶ್ವವಾಯುವಿಗೆ ತುತ್ತಾದರು. ಸ್ವತಃ ವೈದ್ಯಕೀಯ ಚಿಕಿತ್ಸೆಯ ಜ್ಞಾನವಿದ್ದುದರಿಂದ ಸ್ವಲ್ಪಮಟ್ಟಿಗೆ ಚೇತರಿಸಿಕೊಂಡರು. ತಮ್ಮ ಉಳಿದ ಬದುಕನ್ನು ರಾಮಚಂದ್ರನ ಸ್ಮರಣೆಯಲ್ಲಿಯೇ ಕಳೆದರು.

೧೮೬೩ರಲ್ಲಿ, ಅವರಿಗೆ ಅರುವತ್ತು ವರ್ಷ ವಯಸ್ಸಾಗಿದ್ದಾಗ, ಚೈತ್ರ ಶುದ್ಧ ಏಕಾದಶಿಯಂದು, ರಾಮನಾಮಸ್ಮರಣೆ ಮಾಡುತ್ತಲೇ ತಮ್ಮ ದೇಹವನ್ನು ತ್ಯಜಿಸಿದರು. ಇಂದಿಗೂ ಮಹಾರಾಷ್ಟ್ರದ ಕೀರ್ತನಕಾರರು, ವಿಠೋಬಾ ಅಣ್ಣಾ ಅವರ ಸಂಸ್ಕೃತ-ಮರಾಠಿ ಕಾವ್ಯಗಳ ಸಹಾಯ ಪಡೆದುಕೊಂಡು, ತಮ್ಮ ಕೀರ್ತನೆಯು ಕಳೆಕಟ್ಟುವಂತೆ ಮಾಡಿಕೊಳ್ಳುತ್ತಾರೆ.

## ನಾಮರಾಮಾಯಣ – ಕೆಲವು ನಿರ್ಣಯಗಳು

ರಾಮಕೃಷ್ಣ ಮಹಾಸಂಘದ ಆಶ್ರಮಗಳಲ್ಲಿ ಹಾಡಲಾಗುವ ರಾಮನಾಮ ಸಂಕೀರ್ತನೆಯೊಂದಿಗೆ ವಿಠೋಬಾ ಅಣ್ಣಾ ಅವರು ರಚಿಸಿದ, ಇದಕ್ಕಿಂತಲೂ ವಿಸ್ತೃತವಾದ ನಾಮ-ರಾಮಾಯಣವನ್ನು ಹೋಲಿಸಿದಾಗ, ಎರಡೂ ಸಂಸ್ಕರಣಗಳಲ್ಲಿ ಬಾಲಕಾಂಡವು ಬಹುತೇಕ ಒಂದೇ ರೀತಿ ಇರುವುದನ್ನು ಕಾಣಬಹುದು. ಆದರೆ ಇನ್ನಿತರ ಕಾಂಡಗಳು ಸಂಪೂರ್ಣ ಭಿನ್ನರೀತಿಯಲ್ಲಿವೆ. ವಿಠೋಬಾ ಅಣ್ಣಾ ಅವರಿಂದ ರಚಿತವಾದ ಎಲ್ಲಾ ಕೃತಿಗಳೂ ಇನ್ನೂ ಲಭ್ಯವಾಗಿಲ್ಲ. ಹೀಗಾಗಿ ಈಗ ಪ್ರಚಲಿತವಿರುವ ಸಂಕ್ಷಿಪ್ತ ರಾಮಾಯಣವನ್ನು ಕೂಡ ಅವರೇ ರಚಿಸಿರಬಹುದೆಂದು ನಂಬಲಾಗಿದೆ. ಅದನ್ನು ಅವರು ಮೊದಲು ವಿಸ್ತಾರವಾಗಿ ಬರೆದು, ಆಮೇಲೆ ಸಂಕ್ಷೇಪಗೊಳಿಸಿರಲೂಬಹುದು.

ಇದಲ್ಲದೆ ಇನ್ನೊಂದು ಸಂಭವವೂ ಇರಬಹುದು. ಮೈಸೂರಿನ ಭಕ್ತರಾದ ಶ್ರೀ ಕೆ. ಆರ್. ಮೋಹನ್ ಅವರು 'ವಿವೇಕಪ್ರಭ' ಪತ್ರಿಕೆಯ ೨೦೦೬, ಆಗಸ್ಟ್ ಸಂಚಿಕೆಯಲ್ಲಿ ರಾಮನಾಮ ಸಂಕೀರ್ತನೆಯ ಬಗ್ಗೆ ಒಂದು ಲೇಖನವನ್ನು ಬರೆದಿದ್ದಾರೆ. ಅದರಲ್ಲಿ ಹೀಗೆ ಹೇಳಿದೆ: "ತಮಿಳುನಾಡಿನ ತಂಜಾವೂರು ಜಿಲ್ಲೆಯ ತಿರುವಾಯೂರು ನಿವಾಸಿಗಳಾಗಿದ್ದ ಶ್ರೀ ಲಕ್ಷ್ಮಣಾಚಾರ್ಯರು ಇದರ ರಚನಕಾರರು. ಅವರು ೧೯೧೯ರಲ್ಲಿ ಸ್ವರ್ಗವಾಸಿಗಳಾದರು." ಈ ವಿಷಯ ಲೇಖಕರಿಗೆ ತಿಳಿದುಬಂದಿದ್ದು, ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಿರುವ **'ಕರ್ನಾಟಕ ಸಂಗೀತ ಪಾರಿಭಾಷಿಕ ಶಬ್ದಕೋಶ'** ಮತ್ತು ದಕ್ಷಿಣ ಭಾರತೀಯ ಸಂಗೀತ ಮತ್ತು ಸಂಗೀತಕಾರರ ವಿವರಗಳನ್ನು ಒಳಗೊಂಡ, ಪ್ರೊ. ಪಿ. ಸಾಂಬಮೂರ್ತಿ ಅವರು ಸಂಪಾದಿಸಿರುವ *Dictionary of South Indian Music and Musicians* ಗ್ರಂಥದ ಐದನೆಯ ಸಂಪುಟ (ಪು. ೧೫೨) – ಈ ಗ್ರಂಥಗಳಿಂದ.

ಇದಲ್ಲದೆ ಶ್ರೀ ಕೆ.ಆರ್. ಮೋಹನ್ ಅವರು ಕರ್ನಾಟಕದ ನೂರಾರು ಗ್ರಾಮಗಳು ಮತ್ತು ಪಟ್ಟಣಗಳಲ್ಲಿನ ಭಜನಾಮಂದಿರಗಳಲ್ಲಿ ಹಾಡುವ ರೂಢಿಯಿರುವ 'ನಾಮರಾಮಾಯಣ'ದ ಒಂದು ಮುದ್ರಿತ ಪ್ರತಿಯನ್ನು ಈ ಲೇಖನದ ಲೇಖಕರಿಗೆ ಕಳಿಸಿಕೊಟ್ಟಿದ್ದಾರೆ. ೧೬ ಪುಟಗಳ ಈ ಪುಸ್ತಕದ ಹೆಸರು **'ಶ್ರೀರಾಮನಾಮಾಮೃತ'** ಎಂದು. ಇದರ ಪ್ರಕಾಶಕರು ಬೆಂಗಳೂರಿನ ಕಾರ್ತಿಕ್ ಪಬ್ಲಿಕೇಷನ್ಸ್ ಎಂಬ ಸಂಸ್ಥೆ. ಈ ಪುಸ್ತಕದಲ್ಲಿರುವ ಪಠ್ಯವು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಶಾಖೆಗಳಲ್ಲಿ ಪ್ರಚಲಿತವಿರುವ ರಾಮನಾಮ ಸಂಕೀರ್ತನೆಯನ್ನು ಬಹುಮಟ್ಟಿಗೆ ಹೋಲುತ್ತದೆಯಾದರೂ, ಉತ್ತರಕಾಂಡವು ಮಾತ್ರ ಪೂರ್ತಿಯಾಗಿ ಭಿನ್ನರೀತಿಯಲ್ಲಿದೆ.




# ಮಾಂಡೂಕ್ಯೋಪನಿಷತ್ತು

ಸ್ವಾಮಿ ಆದಿದೇವಾನಂದ

**ಉಪನಿಷತ್ತುಗಳಲ್ಲೆಲ್ಲ ಅತ್ಯಂತ ಚಿಕ್ಕದಾದರೂ ಕೂಡ, ಅತ್ಯಂತ ಗಹನವಾದ ಉಪನಿಷತ್ತು ಮಾಂಡೂಕ್ಯ ಉಪನಿಷತ್ತು. ಅವಸ್ಥಾತ್ರಯ ಮತ್ತು ಪ್ರಣವೋಪಾಸನೆಗಳನ್ನು ಈ ಉಪನಿಷತ್ತಿನಲ್ಲಿ ವಿವರಿಸಲಾಗಿದೆ. ಶ್ರೀಶಂಕರಾಚಾರ್ಯರ ಪರಮಗುರುಗಳಾದ ಗೌಡಪಾದಾಚಾರ್ಯರು ಈ ಉಪನಿಷತ್ತಿಗೆ ವಿವರಣಾತ್ಮಕವಾದ ಕಾರಿಕೆಗಳನ್ನು ಬರೆದಿದ್ದಾರೆ. ಈ ಎಲ್ಲ ವಿಷಯಗಳನ್ನು ವಿದ್ವತ್ಪೂರ್ಣವಾಗಿ ಪರಿಚಯಿಸಿರುವ ಪೂಜ್ಯ ಸ್ವಾಮೀಜಿಯವರು ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳು. ಇವರು ಹಲವಾರು ವರ್ಷಗಳ ಹಿಂದೆಯೇ ಭಗವದ್ಗೀತೆ, ಉಪನಿಷತ್ತುಗಳು, ಬ್ರಹ್ಮಸೂತ್ರ ಮತ್ತು ಹಲವಾರು ಸ್ತೋತ್ರಗಳನ್ನು ಕನ್ನಡಕ್ಕೆ ವಿವರಣೆ ಸಮೇತ ಅನುವಾದಿಸಿದ್ದಾರೆ.**

## ಪೀಠಿಕೆ

ಹನ್ನೆರಡು ಮಂತ್ರಗಳನ್ನು ಒಳಗೊಂಡಿರುವ ಮಾಂಡೂಕ್ಯ ಉಪನಿಷತ್ತು ಅಥರ್ವಣ ವೇದಕ್ಕೆ ಸೇರಿದೆ. ಈ ಉಪನಿಷತ್ತು ಗಾತ್ರದಲ್ಲಿ ಕಿರಿಯದಾದರೂ ಅದರ ಮಹತ್ತ್ವವು ಅತ್ಯಂತ ಹಿರಿಯದು. "ಮುಮುಕ್ಷುಗಳ ಮುಕ್ತಿಗೆ ಮಾಂಡೂಕ್ಯ ಉಪನಿಷತ್ತೊಂದೇ ಸಾಕು" (**ಮಾಂಡೂಕ್ಯಮೇಕಮೇವಾಲಂ ಮುಮುಕ್ಷೂಣಾಂ ವಿಮುಕ್ತಯೇ**) ಎಂದು ಮುಕ್ತಿಕೋಪನಿಷತ್ತು ಘೋಷಿಸುತ್ತದೆ. ನೂರೆಂಟು ಉಪನಿಷತ್ತುಗಳ ಮೇಲೆ ವ್ಯಾಖ್ಯಾನ ಮಾಡಿರುವ ಉಪನಿಷದ್ ಬ್ರಹ್ಮಯೋಗಿಯು ಮಾಂಡೂಕ್ಯೋಪನಿಷತ್ತನ್ನು 'ಸರ್ವವೇದಾಂತಸಾರಿಷ್ಠ' ಎಂದು ಕರೆದಿರುತ್ತಾರೆ. ಗೌಡಪಾದರ ಕಾರಿಕೆಗಳಿಂದ ಕೂಡಿರುವ ಈ ಉಪನಿಷತ್ತನ್ನು ಶ್ರೀಶಂಕರಾಚಾರ್ಯರು, 'ವೇದಾಂತಾರ್ಥಸಾರದ ಸಂಗ್ರಹ' (**ವೇದಾಂತಾರ್ಥಸಾರಸಂಗ್ರಹಭೂತಮ್**) ಎಂದು ತಮ್ಮ ಭಾಷ್ಯದಲ್ಲಿ ವರ್ಣಿಸಿರುತ್ತಾರೆ. ಇತರ ಉಪನಿಷತ್ತುಗಳಂತೆ ಈ ಉಪನಿಷತ್ತಿನ ಉದ್ದೇಶವೂ ಪರಮಾರ್ಥವಸ್ತುವಿನ ಅನ್ವೇಷಣೆಯೇ ಆಗಿದೆ. ಆದರೆ ತತ್ತ್ವವನ್ನು ಅರಿತುಕೊಳ್ಳಲು ಪ್ರಯೋಗಿಸಿರುವ ಪದ್ಧತಿ ಅಥವಾ ರೀತಿಯೇ ಈ ಉಪನಿಷತ್ತಿನ ವೈಶಿಷ್ಟ್ಯ. ಹಾಗೆಯೇ ಪ್ರಾಣಿಗಳಿಗೆಲ್ಲ ಸಾಮಾನ್ಯವಾದ ಜಾಗ್ರತ್ತು, ಸ್ವಪ್ನ, ಸುಷುಪ್ತಿ (ಎಂದರೆ ಗಾಢನಿದ್ರೆ) ಎಂಬ ಮೂರು ಅವಸ್ಥೆಗಳ ವಿಶ್ಲೇಷಣೆಯೇ ಈ ಉಪನಿಷತ್ತಿನ ವಿಶಿಷ್ಟ ವಿಷಯ. ಈ ಅವಸ್ಥಾತ್ರಯದ ವಿಚಾರದ ಮೂಲಕ ನಾಲ್ಕನೆಯದಾದ ತುರೀಯವು ಇದರಲ್ಲಿ ಪ್ರತಿಪಾದಿತವಾಗಿದೆ.

ಈ ಉಪನಿಷತ್ತಿನಲ್ಲಿ ತತ್ತ್ವನಿರೂಪಣೆಗೆ ಬೇಕಾದ ಆಖ್ಯಾಯಿಕೆಯಾಗಲಿ, ಕರ್ಮಕಾಂಡಕ್ಕೆ ಸಂಬಂಧಿಸಿದ ವಿಷಯವಾಗಲಿ ಇಲ್ಲ. ಇಲ್ಲಿ ನೇರವಾಗಿ ಆಧ್ಯಾತ್ಮಿಕ ವಿಷಯವನ್ನಷ್ಟೇ ಹೇಳಿದೆ. ಈ ಉಪನಿಷತ್ತು ಅತ್ಯಂತ ಸಂಗ್ರಹರೂಪದಲ್ಲಿರುವುದರಿಂದ ಇದರ ಅರ್ಥವನ್ನು ತಿಳಿಯುವುದು ಸುಲಭಸಾಧ್ಯವಲ್ಲ. ಶ್ರೀಶಂಕರಾಚಾರ್ಯರ ಪರಮಗುರುಗಳಾದ ಗೌಡಪಾದಾಚಾರ್ಯರು ಈ ಉಪನಿಷತ್ತಿನ ಅಂತರಾರ್ಥವನ್ನು ವ್ಯಕ್ತಪಡಿಸಲು ತಮ್ಮ ಪ್ರಸಿದ್ಧವಾದ ಕಾರಿಕೆಗಳನ್ನು ಬರೆದಿದ್ದಾರೆ. ಶ್ರೀಶಂಕರಾಚಾರ್ಯರು ಅವುಗಳ ತಾತ್ಪರ್ಯವನ್ನು ಇನ್ನೂ ವಿಶದಪಡಿಸಲು ಉಪನಿಷತ್ತಿನ ಮೇಲೂ, ಕಾರಿಕೆಗಳ ಮೇಲೂ ಭಾಷ್ಯವನ್ನು ಬರೆದಿದ್ದಾರೆ.

## ಅವಸ್ಥಾತ್ರಯ

ಮಾಂಡೂಕ್ಯೋಪನಿಷತ್ತು 'ಇವೆಲ್ಲವೂ ಓಂ ಎಂಬ ಈ ಅಕ್ಷರವು' (**ಓಮಿತ್ಯೇತದಕ್ಷರಮಿದಂ**) ಎಂದು ಪ್ರಾರಂಭವಾಗುತ್ತದೆ. ಹಿಂದೆ ಆಗಿಹೋಗಿರುವುದು, ಈಗ ಇರುವುದು ಮತ್ತು ಮುಂದಿನದು – ಇವೆಲ್ಲವೂ ಓಂಕಾರವೇ. ವ್ಯಾಕೃತ ಜಗತ್ತು, ಅದಕ್ಕೆ ಕಾರಣವಾದ ಅವ್ಯಾಕೃತ – ಇವೆಲ್ಲವೂ ಓಂಕಾರವಾಗಿರುವ ಬ್ರಹ್ಮವೇ. ಜೀವಿಗಳ ದೇಹದಲ್ಲಿ ಪ್ರತ್ಯಕ್ ರೂಪದಿಂದ ಭಾಸವಾಗುವ ಈ ಆತ್ಮನು ಬ್ರಹ್ಮವೇ (**ಅಯಮಾತ್ಮಾ ಬ್ರಹ್ಮ**). ಓಂಕಾರದಿಂದ ಸೂಚಿಸಲ್ಪಡುವವನೂ ಪರಾಪರ ಬ್ರಹ್ಮರೂಪನೂ ಆದ ಈ ಆತ್ಮನಿಗೆ **ವೈಶ್ವಾನರ, ತೈಜಸ, ಪ್ರಾಜ್ಞ** ಮತ್ತು **ತುರೀಯ** ಎಂಬ ನಾಲ್ಕು ಪಾದಗಳಿವೆ. ಜಾಗ್ರದವಸ್ಥೆಯಲ್ಲಿರುವ ವೈಶ್ವಾನರನು **'ಅ'**ಕಾರವೆಂಬ ಮೊದಲನೆಯ ಮಾತ್ರೆ, ಸ್ವಪ್ನಸ್ಥಾನದಲ್ಲಿರುವ ತೈಜಸನು **'ಉ'**ಕಾರವೆಂಬ ಎರಡನೆಯ ಮಾತ್ರೆ. ಸುಷುಪ್ತಿಸ್ಥಾನದಲ್ಲಿರುವ ಪ್ರಾಜ್ಞನು **'ಮ'** ಕಾರವೆಂಬ ಮೂರನೆಯ

ಮಾತ್ರೆ. ಮಾತ್ರೆಯಿಲ್ಲದ ಓಂಕಾರ ವ್ಯವಹಾರಾತೀತವೂ ಅದ್ವೈತವೂ ಆದ ತುರೀಯ, ಎಂದರೆ ಪಾರಮಾರ್ಥಿಕವಾದ ಆತ್ಮಸ್ವರೂಪ. ಹೀಗೆ ಓಂಕಾರ ಆತ್ಮನೇ. ಜಾಗೃದವಸ್ಥೆಯಲ್ಲಿ ಆತ್ಮನು ಬಾಹ್ಯಪ್ರಜ್ಞೆಯುಳ್ಳವನಾಗಿ ಸ್ಥೂಲ ವಿಷಯಗಳನ್ನು ಅನುಭವಿಸುತ್ತಾನೆ; ಸ್ವಪ್ನಾವಸ್ಥೆಯಲ್ಲಿ ಅಂತಃಪ್ರಜ್ಞನಾಗಿ ಸೂಕ್ಷ್ಮವಿಷಯಗಳನ್ನು ಅನುಭವಿಸುತ್ತಾನೆ. ಸುಷುಪ್ತಿಯಲ್ಲಿ ಬಯಕೆಗಳಾಗಲಿ ಸ್ವಪ್ನಗಳಾಗಲಿ ಇರುವುದಿಲ್ಲ; ದೃಗ್, ದೃಶ್ಯ – ಈ ಎರಡೂ ಒಂದಾಗಿರುತ್ತದೆ. ಈ ಅವಸ್ಥೆಯಲ್ಲಿ ಆತ್ಮನು ಪ್ರಜ್ಞಾನಘನನೂ ಆನಂದಮಯನೂ ಆನಂದಭೋಗಿಯೂ ಆಗಿರುತ್ತಾನೆ. ತುರೀಯನು ಅಂತಃಪ್ರಜ್ಞನಲ್ಲ, ಅಪ್ರಜ್ಞನಲ್ಲ, ಉಭಯಪ್ರಜ್ಞನಲ್ಲ, ಪ್ರಜ್ಞಾನಘನನಲ್ಲ, ಪ್ರಜ್ಞನಲ್ಲ, ಅಪ್ರಜ್ಞನಲ್ಲ; ಅದೃಶ್ಯನೂ ಅವ್ಯವಹಾರ್ಯನೂ ಅಗ್ರಾಹ್ಯನೂ ಲಕ್ಷಣ ರಹಿತನೂ ಅಚಿಂತ್ಯನೂ ಉಪದೇಶಕ್ಕೆ ಅತೀತನೂ ಆಗಿರುತ್ತಾನೆ; ಅವನು ಏಕಾತ್ಮಪ್ರತ್ಯಯಸಾರನು, ಶಿವನು ಮತ್ತು ಅದ್ವೈತನು. ಹೀಗೆ ವಿಧಿಮುಖದಿಂದಲೂ, ನಿಷೇಧಮುಖದಿಂದಲೂ ಮಾಂಡೂಕ್ಯ ಉಪನಿಷತ್ತು ಆತ್ಮನ ನಿಜವಾದ ಸ್ವರೂಪವನ್ನು ಬೋಧಿಸುತ್ತದೆ.

ಗೌಡಪಾದರು ತಮ್ಮದೇ ಆದ ಒಂದು ವಿಶಿಷ್ಟ ರೀತಿಯಲ್ಲಿ ಮಾಂಡೂಕ್ಯೋಪನಿಷತ್ತಿನ ತಾತ್ಪರ್ಯವನ್ನು ವಿವರಿಸಿದ್ದಾರೆ. ಒಬ್ಬನೇ ಆದ ಆತ್ಮನು ಜಾಗೃತ್–ಸ್ವಪ್ನ–ಸುಷುಪ್ತಿಗಳೆಂಬ ಅವಸ್ಥೆಗಳಲ್ಲಿ ವಿಶ್ವ–ತೈಜಸ–ಪ್ರಾಜ್ಞರೆಂಬ ರೂಪಗಳಿಂದ ತೋರುತ್ತಾನೆಂದು ಹಿಂದೆ ಹೇಳಿದ್ದಾಯಿತು. ಬೃಹದಾರಣ್ಯಕ ಉಪನಿಷತ್ತಿನ ಆಧಾರದ ಮೇಲೆ ಈ ಮೂವರಿಗೆ ಶರೀರದಲ್ಲಿ ಸ್ಥಾನಗಳನ್ನು ಅವರು ನಿರ್ದೇಶಿಸಿದ್ದಾರೆ: ವಿಶ್ವನು (ಅಥವಾ ವೈಶ್ವಾನರನು) ಬಲಗಣ್ಣಿನಿಂದ ನೋಡುತ್ತಾನೆ. ತೈಜಸನು ಮನಸ್ಸಿನಿಂದ ಅರಿಯುತ್ತಾನೆ, ಹೃದಯಾಕಾಶದಲ್ಲಿರುವವನು ಪ್ರಾಜ್ಞನು. ವಿಶ್ವ–ತೈಜಸ–ಪ್ರಾಜ್ಞರೆಂದು ವಿಂಗಡಿಸಲ್ಪಟ್ಟ ಮೂವರು ಒಬ್ಬನೇ ಆತ್ಮನೆಂದೂ, ಈ ಮೂವರ ಅನುಭವವು ಜಾಗೃದವಸ್ಥೆಯಲ್ಲಿಯೇ ಉಂಟಾಗುವುದೆಂದೂ ತಿಳಿಸುವುದಕ್ಕಾಗಿ, ಅವರಿಗೆ ಶರೀರದಲ್ಲಿ ಸ್ಥಾನಗಳನ್ನು ನಿಯಮಿಸಿದೆ. ವ್ಯವಹಾರ ದೃಷ್ಟಿಯಿಂದ ವಿಶ್ವ–ತೈಜಸ–ಪ್ರಾಜ್ಞರು ಜಾಗೃತ್–ಸ್ವಪ್ನ–ಸುಷುಪ್ತಿಗಳಿಗೆ ಕ್ರಮವಾಗಿ ಸೇರಿದ್ದಾರೆ. ಆದರೆ ಈ ಅವಸ್ಥಾತ್ರಯದ ಅನುಭವ ಕೂಡ ಜಾಗೃದವಸ್ಥೆಯಿಂದಲೇ ವೇದ್ಯವಾಗುತ್ತದೆ.

ಆಧ್ಯಾತ್ಮಿಕ ದೃಷ್ಟಿಕೋನದಿಂದ ಅವಸ್ಥಾತ್ರಯದ ಅರ್ಥವೇನು? ಪರಮಾರ್ಥವಾಗಿ ನಮ್ಮ ಎಚ್ಚರವು ಎಚ್ಚರವೇ ಅಲ್ಲ; ಸ್ವಪ್ನ ಸುಷುಪ್ತಿಗಳಂತೆ ಇಲ್ಲಿಯೂ ಅಜ್ಞಾನದ ಕತ್ತಲು ಕವಿದುಕೊಂಡಿದೆ. ತತ್ತ್ವದ ಅಜ್ಞಾನರೂಪವಾದ ಮತ್ತು ಅನ್ಯಥಾಗ್ರಹಣ ರೂಪವಾದ (ತಪ್ಪಾಗಿ ತಿಳಿಯುವ) ನಿದ್ರೆಯಿಂದ ಜೀವನು ಯಾವಾಗ ಎಚ್ಚರಗೊಳ್ಳುವನೋ ಆಗ ಅವನಿಗೆ ನಿಜವಾಗಿ ಎಚ್ಚರವಾಗುವುದು. ಈ ಅಲೌಕಿಕಾನುಭವದಿಂದ ನೋಡಿದರೆ ಜಾಗೃತ್–ಸ್ವಪ್ನ–ಸುಷುಪ್ತಿಗಳೇ ಜೀವಾತ್ಮನ ರಾತ್ರಿಗಳಾಗಿರುತ್ತವೆ. ಶ್ರೀಕೃಷ್ಣನು ಹೇಳಿರುವಂತೆ, "ಎಲ್ಲ ಪ್ರಾಣಿಗಳಿಗೆ ಯಾವುದು ರಾತ್ರಿಯೋ ಅದರಲ್ಲಿ ಸಂಯಮಿಯು ಎಚ್ಚೆತ್ತಿರುತ್ತಾನೆ; ಯಾವುದರಲ್ಲಿ ಪ್ರಾಣಿಗಳು ಎಚ್ಚೆತ್ತಿರುವವೋ ಅದು ಮುನಿಯಾದವನಿಗೆ ರಾತ್ರಿಯು" (ಗೀತಾ. ೨:೬೯). ಪಾರಮಾರ್ಥಿಕ ಪ್ರಬೋಧವೇ ಎಚ್ಚರವಾದರೆ, ಸ್ವಪ್ನ ರಾತ್ರಿಗಳು ಯಾವುವು? ಅನ್ಯಥಾಗ್ರಹಣವೇ (ತತ್ತ್ವವನ್ನು ತಪ್ಪಾಗಿ ತಿಳಿಯುವುದು) ಸ್ವಪ್ನ, ತತ್ತ್ವವನ್ನು ತಿಳಿಯದೆ ಇರುವುದೇ ನಿದ್ರೆ.

ಅವಸ್ಥಾತ್ರಯದ ಪರೀಕ್ಷೆಯಿಂದ ಈ ಸಿದ್ಧಾಂತಕ್ಕೆ ನಾವು ಬರಬಹುದು.

**೧. ಜಾಗೃದವಸ್ಥೆಯಲ್ಲಿ ಸ್ವಪ್ನ–ಸುಷುಪ್ತಿಗಳ (ಎಂದರೆ ಅನ್ಯಥಾ ಗ್ರಹಣದ ಮತ್ತು ಅಗ್ರಹಣದ) ಅನುಭವವಾಗುವುದು.**

**೨. ಸ್ವಪ್ನದಲ್ಲಿ ಸುಷುಪ್ತಿಯ ಎಂದರೆ (ಅಗ್ರಹಣದ) ಅನುಭವವೂ ಇರುವುದು.**

**೩. ಸುಷುಪ್ತಿಯಲ್ಲಿ ಸ್ವಪ್ನರಹಿತವಾದ ನಿದ್ರೆಯು ಮಾತ್ರ ಉಳಿಯುವುದು.**

ಅವಿದ್ಯಾರೂಪವಾದ ನಿದ್ರೆಯು ಸಂಸಾರದೆಶೆಯುದ್ದಕ್ಕೂ ಎಡಬಿಡದೆ ಇದ್ದು, ಜ್ಞಾನೋದಯವಾದ ಕೂಡಲೇ ನಾಶವಾಗುವುದು. ಅನಾದಿ ಮಾಯೆಯಿಂದ ಸುಪ್ತನಾದ ಜೀವಿಯು ಯಾವಾಗ ಎಚ್ಚರಗೊಳ್ಳುವನೋ ಆಗ ಅಜವೂ, ನಿದ್ರಾ ಸ್ವಪ್ನ ರಹಿತವೂ ಆದ ಅದ್ವೈತವನ್ನು ಅರಿತುಕೊಳ್ಳುವನು.

ಶಂಕರಾಚಾರ್ಯರು ಗೌಡಪಾದರ ಏಳನೆಯ ಕಾರಿಕೆಯ ಮೇಲೆ ವ್ಯಾಖ್ಯಾನ ಮಾಡುತ್ತ ಅವಸ್ಥಾತ್ರಯವನ್ನೂ, ವಿಶ್ವ–ತೈಜಸ–ಪ್ರಾಜ್ಞರೆಂಬ ಆತ್ಮತ್ರಯವನ್ನೂ ಇಂದ್ರಜಾಲಕನ ಮಾಯೆಗೆ ಹೋಲಿಸಿರುತ್ತಾರೆ. ಇಂದ್ರಜಾಲಕನು ಆಕಾಶದಲ್ಲಿ ನೂಲೇಣಿಯನ್ನು ಹಾಕಿ, ಆಯುಧಗಳೊಡನೆ ಅದನ್ನು ಹತ್ತಿ, ಮೇಲೆ ಮಾಯವಾಗಿ, ಅಲ್ಲಿನ ಯುದ್ಧದಲ್ಲಿ ತನ್ನ ಅವಯವಗಳನ್ನು ಕತ್ತರಿಸಿಕೊಂಡು, ಕೆಳಗೆ ಬಿದ್ದು ಪುನಃ ಏಳುತ್ತಾನೆ. ಇವೆಲ್ಲವೂ ಮಾಯೆಯಾದುದರಿಂದ ಪ್ರೇಕ್ಷಕನು ಉದಾಸೀನನಾಗಿರುತ್ತಾನೆ. ಹಾಗೆಯೇ ಜಾಗೃತ್–ಸ್ವಪ್ನ–ಸುಷುಪ್ತಿಗಳಿಂದ ವಿಕಾಸವಾಗಿರುವ ಈ ಜಗತ್ತು ಇಂದ್ರಜಾಲಿಕನು ನೂಲೇಣಿಯನ್ನು ಹಾಕಿದಂತಿರುವುದು. ವಿಶ್ವ–ತೈಜಸ–ಪ್ರಾಜ್ಞರು ಆ ನೂಲೇಣಿಯನ್ನು ಹತ್ತಿದ ಇಂದ್ರಜಾಲಿಕನಂತೆ. ನೂಲೇಣಿಯನ್ನೇರಿದ ಇಂದ್ರಜಾಲಿಕ ಮತ್ತು ನೂಲೇಣಿ ಇವೆರಡಕ್ಕೂ ಭಿನ್ನವಾದ ನಿಜವಾದ ಮಾಯಾವಿಯು ಇರುವಂತೆ, ಪರಮಾರ್ಥವಾದ ತುರೀಯವು ಇರುವುದು.

## ಪ್ರಣವೋಪಾಸನೆ

ಜನ್ಮ ಮೃತ್ಯುಗಳ ಪುನರಾವೃತ್ತಿಯೇ ಸಂಸಾರ. ನಿತ್ಯ–ಶುದ್ಧ–ಬುದ್ಧ–ಮುಕ್ತಸ್ವಭಾವದವನಾದ ಆತ್ಮನಿಗೆ ನಿಜವಾಗಿ ಸಂಸಾರವಿಲ್ಲ. ಆದರೂ, ದೇಹೇಂದ್ರಿಯಸಂಘಾತದೊಂದಿಗೆ ತಾದಾತ್ಮ್ಯವನ್ನು ಪಡೆದು ಜೀವಿಯೆಂದು ಎನಿಸಿಕೊಂಡವನಿಗೆ ಸಂಸಾರವು ಇರುತ್ತದೆ. ಆತ್ಮನು ತನ್ನ